ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್




# ವಿಶ್ವಾತ್ಮಕ ಜಾತೀಯತೆ!

ನಮ್ಮಲ್ಲಿ ಅಸ್ಪೃಶ್ಯತೆ ಹೇಗೆ ಬಂತು ಎನ್ನುವುದು ಬಹುದೊಡ್ಡ ಪ್ರಶ್ನೆ. ಹಾಗೆಯೇ ಕೆಲವರ ಆಹಾರ ಪದ್ಧತಿಯಲ್ಲಿ ಸಸ್ಯಾಹಾರ ಬಂದದ್ದಕ್ಕೂ ದನದ ಮಾಂಸ ವರ್ಜ್ಯವಾದದ್ದಕ್ಕೂ ಏನಾದರೊಂದು ಹಿನ್ನೆಲೆಯಿರಬಹುದು. ಅಂಬೇಡ್ಕರ್ ಬರೆದ 'ಅಸ್ಪೃಶ್ಯರು: ಯಾರವರು? ಹೇಗಾದರು?' ಪುಸ್ತಕದಲ್ಲಿ ಈ ಬಗ್ಗೆ ಒಂದು ವಿಶ್ಲೇಷಣೆಯಿದೆ. ಈ ವಿಶ್ಲೇಷಣೆಯಲ್ಲಿ ಅಂಬೇಡ್ಕರ್, ಅಸ್ಪೃಶ್ಯತೆಗೆ ಜನಾಂಗೀಯ ವ್ಯತ್ಯಾಸ ಕಾರಣವಲ್ಲ ಎಂದು ವಾದಿಸುತ್ತಾರೆ. ಜನಾಂಗೀಯವಾಗಿ ನೋಡಿದರೆ, ಸವರ್ಣ ಹಿಂದೂ ಮತ್ತು ಅವರ್ಣ ಹಿಂದೂವಿನ ಮಧ್ಯೆ ವರ್ಣಭೇದವಿಲ್ಲ. ಬಣ್ಣ ಅಥವಾ ದೈಹಿಕ ಲಕ್ಷಣಗಳಲ್ಲಿ ಅವರು ಭಿನ್ನರಲ್ಲ. ಹೀಗಾಗಿ ಜನಾಂಗೀಯ ವಾದವನ್ನು ಹಿಡಿದು ಹೊರಡುವುದು ಸರಿಯಲ್ಲ. ಹಾಗೆಯೇ ಕಾಯಕಕ್ಕೂ ಅಸ್ಪೃಶ್ಯತೆಗೂ ಯಾವುದೇ ಕೊಂಡಿಯನ್ನು ಹಾಕುವುದು ಸರಿಯಲ್ಲವೆಂದೂ ಅಂಬೇಡ್ಕರ್ ವಾದಿಸುತ್ತಾರೆ. ಕೆಲವು ಕೆಲಸಗಳು ಮೂಲತಃ ಅಶುದ್ಧವಾಗಿದ್ದರೂ, ಅಶುದ್ಧತೆಗೂ ಅಸ್ಪೃಶ್ಯತೆಗೂ ಸಂಬಂಧ ಕಾಣುವುದಿಲ್ಲ ಎನ್ನುತ್ತಾರೆ.

> ಆಕ್ರಮಿಸಿಕೊಂಡು ನೆಲೆನಿಂತವರು ಗೂಟವೂರಿ ಜಮೀನುದಾರರಾದರೆ, ಹೊರಗುಳಿದವರು ದಲಿತರಾಗುತ್ತಾರೆ. ಅವರುಗಳನ್ನು ಹೊರಜನರಾಗಿ ಉಳಿಸಿ ಊಳಿಗ ಬಯಸುವುದು ಮತ್ತು ಅವರ ಭಿನ್ನತೆಯನ್ನೇ ಶೋಷಣೆಯ ಪರಿಕರವನ್ನಾಗಿ ಉಪಯೋಗಿಸುವುದು ಭಾರತಕ್ಕೆ ಸೀಮಿತವಾಗಿಲ್ಲ.

ಅಂಬೇಡ್ಕರ್ ಅಸ್ಪೃಶ್ಯತೆಯ ಹಿನ್ನೆಲೆಯನ್ನು ಭಿನ್ನವಾಗಿ ವಿಶ್ಲೇಷಿಸಲು ಪ್ರಯತ್ನಿಸುತ್ತಾರೆ. ಹೀಗೆ ಕೈಗೊಳ್ಳುವ ವಿಶ್ಲೇಷಣೆಯಲ್ಲಿ ಚಾರಿತ್ರಿಕವಾಗಿ ಸವರ್ಣ ಹಿಂದೂಗಳು ದನದ ಮಾಂಸ ಸೇವನೆಯನ್ನು ಬಿಟ್ಟುಕೊಡುವುದಕ್ಕೂ ಅಸ್ಪೃಶ್ಯತೆ ಪ್ರಾರಂಭವಾಗುವುದಕ್ಕೂ ಒಂದು ಕೊಂಡಿ ಇರಬಹುದೇ, ಹಾಗೂ ಅದು ಬೌದ್ಧ ಧರ್ಮ ವ್ಯಾಪಕವಾಗಿ ಹಬ್ಬುವ ಕಾಲಕ್ಕೆ ಇದೂ ಪ್ರಾರಂಭವಾಯಿತೇ ಎನ್ನುವ ಪ್ರಶ್ನೆಯನ್ನು ಕೇಳುತ್ತಾರೆ. ಅಂಬೇಡ್ಕರ್ ಈ ಪುಸ್ತಕವನ್ನು ಬರೆದಾಗ ಅದಕ್ಕೆ ವ್ಯಾಪಕವಾಗಿ ಹಿಂದೂಗಳಿಂದ ವಿರೋಧ ಬರಬಹುದೆಂದು ನಿರೀಕ್ಷಿಸಿದ್ದಿರಬಹುದು. ಹೀಗಾಗಿಯೇ ಅವರು ಆ ಪುಸ್ತಕದಲ್ಲಿರುವ ಮಾತುಗಳಿಗೆ ಬರಬಹುದಾದ ಟೀಕೆಗಳಿಗೆ ಮೊದಲೇ ತಮ್ಮ ವಾದಗಳ ಮೂಲಕ ಜವಾಬನ್ನು ಮತ್ತು ಅದಕ್ಕಿರುವ ಆಕರ ಗ್ರಂಥಗಳ ಮೂಲವನ್ನೂ ನೀಡುತ್ತಾರೆ.




ಸ್ಥೂಲವಾಗಿ ಅಂಬೇಡ್ಕರ್ ವಾದಿಸುವುದು ಇಷ್ಟು – ಅಸ್ಪೃಶ್ಯತೆಗೂ, ದನದ ಮಾಂಸದ ಸೇವನೆಗೂ ಗಾಢ ಸಂಬಂಧವಿದೆ. ಚಾರಿತ್ರಿಕವಾಗಿ ಇದರ ಉಗಮ ಬೌದ್ಧಧರ್ಮ ಮತ್ತು ಹಿಂದೂಧರ್ಮದ ನಡುವಿನ ಘರ್ಷಣೆಯ ಫಲವಾಗಿ ಇದ್ದಿರಬಹುದು. ಬೌದ್ಧಧರ್ಮ ವ್ಯಾಪಕವಾಗಿ ಹಬ್ಬುತ್ತಿದ್ದ ಕಾಲಕ್ಕೆ ಹಿಂದೂಧರ್ಮ ಮತ್ತು ಬ್ರಾಹ್ಮಣರ ಔನ್ನತ್ಯವನ್ನು ಉಳಿಸಿಕೊಳ್ಳುವ ಸಲುವಾಗಿ ಆಗ ಪ್ರಚಲಿತವಿದ್ದ ಪ್ರಾಣಿ ಬಲಿಯನ್ನು ಕೈಬಿಟ್ಟು ಅಹಿಂಸಾವಾದದ ಪ್ರತೀಕಗಳನ್ನು